ಡಾ.ಭೀಮಣ್ಣ ಘನಾಥೆ
ಸರಕಾರಿ ಮಹಿಳಾ ಪ್ರತಮ ದರ್ಜೆ ಕಾಲೇಜ
ಕಲಬುರಗಿ

# ಭಾರತದ ಸ್ವಾತಂತ್ರ್ಯ ಮಂದಗಾಮಿಗಳ ಪಾತ್ರ ಚಳವಳಿಯಲ್ಲಿ ೧೮೮೫ – ೧೯೦೫

೧. ಪೀಠಿಕೆ
೨. ಪ್ರಮುಖ ಮಂದಗಾಮಿ ನಾಯಕರು
೩. ಮಂದಗಾಮಿ ನಾಯಕರ ಹೋರಾಟದ ನೀತಿ (ಸಿದ್ಧಾಂತ)
೪. ಮ0ದಗಾಮಿ ನಾಯಕರ ಬೇಡಿಕೆಗಳು
೫. ಮಂದಗಾಮಿ ನಾಯಕರ ಕಾರ್ಯ ಚಟುವಟಿಕೆಗಳು
೬. ಮಂದಗಾಮಿ ನಾಯಕರ ಕಾರ್ಯ ಚಟುವಟಿಕೆಗಳ ಪರಿಣಾಮಗಳು
೭. ವಿಮರ್ಶೆ & ಉಪಸಂಹಾರ

ಪೀಠಕೆ :-

ಭಾರತದ ರಾಷ್ಟ್ರೀಯ ಚಳುವಳಿಯನ್ನು ಅದ್ಯಾಯನ ಮಾಡಲು ಮೂರು ಹಂತಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆಯ ಹಂತವನ್ನು (೧೮೮೫ ರಿಂದ ೧೯೦೫ ರವರೆಗೆ ೨೦ ವರ್ಷ) ಮಂದಗಾಮಿಗಳ ಕಾಲವೆಂದು ಕರೆಯಲಾಗಿದೆ. ಈ ಹಂತದ ನಾಯಕರು ರಕ್ತ ಮತ್ತು ವರ್ಣದಲ್ಲಿ ಮಾತ್ರ ಭಾರತೀಯರಾಗಿದ್ದರು. ಆದರೆ ಅಭಿರುಚಿ, ಅಭಿಪ್ರಾಯ, ನೈತಿಕತೆ, ಮತ್ತು ವೈಚಾರಿಕತೆಯಲ್ಲಿ ಬ್ರಿಟಿಷರಾಗಿದ್ದರು. ಇವರು ಆಂಗ್ಲರ ನ್ಯಾಯಯುತ ಆಡಳಿತ ನೀತಿಯಲ್ಲಿ ನಂಬಿಕೆಯುಳ್ಳವರಾಗಿದ್ದರು. ಭಾರತೀಯರ ಆರ್ಥಿಕ ಮತ್ತು ಸಾಮಾಜಿಕ ಮಟ್ಟವನ್ನು ಗುಣಪಡಿಸುವದು, ಮತ್ತು ಭಾರತೀಯರಿಗೆ ಆಡಳಿತದಲ್ಲಿ ಪಾಲು ಕೊಡಿಸುವ ಉದ್ದೇಶವನ್ನು ಹೊಂದಿದ್ದರು ಎರಡನೇಯ ಹಂತ (೧೯೦೫ ರಿಂದ ೧೯೨೦ ರವರೆಗೆ ೧೫ ವರ್ಷ) ಎರಡನೇಯ ಹಂತವನ್ನು Ãವ್ರವಾದಿಗಳ ಕಾಲ ಎಂದು ಪ್ರಸಿದ್ಧಿಯಾಗಿದೆ. ಇನ್ನೂ ಮೂರನೇಯ ಹಂತವನ್ನು (೧೯೨೦ ರಿಂದ ೧೯೪೭ ರವರೆಗೆ) ಗಾಂಧೀ ಕಾಲವೆಂದು ಕರೆಯಲಾಗುತ್ತದೆ.

ಪ್ರಮುಖ ಮಂದಗಾಮಿ ನಾಯಕರು .

ಏ.ಓ.ಹ್ಯೂಮ್. ಸುರೇಂದ್ರನಾಥ ಬ್ಯಾನಜಿ, W.C ಬ್ಯಾನರ್ಜಿ, ದಾದಾಬಾಯಿ ನವರೋಜಿ, ಫೀರೋಜಶಹಾ ಮೆಹತಾ, ಗೋಪಾಲ ಕೃಷ್ಣ ಗೋಖಲೆ, ಮದನ್ ಮೋಹನ್ ಮಾಳವೀಯ, ಆರವಿಂದ ಚರ್ಲು, ಮುಕಂದ ರಾಮರಾವ, ಜೈಕರ ಇನ್ನೂ ಮುಂತಾದವರು.

೧. ಮ0ದಗಾಮಿ ನಾಯಕರ ಹೋರಾಟದ ನೀತಿ (ಸಿದ್ಧಾಂತ)

೧.) ಭಾರತದಲ್ಲಿ ಬ್ರಿಟಿಷ ಪ್ರಭುತ್ವವನ್ನು ಶಾಶ್ವತಗೊಳಿಸುವುದು.
೨.) ಇಂಗ್ಲೇ0ಡಿನ ಮಹಾರಾಣಿಯ ವಿರೋಧ ಪಕ್ಷದಂತೆ ಭಾರತದಲ್ಲಿ ಕಾಂಗ್ರೇಸ್ಸ ಪಕ್ಷ ಭಾರತದಲ್ಲಿ ಕೆಲಸ ಮಾಡುವುದು
೩.) ಸರ್ಕಾರದ ಲೋಪದೋಷಗಳನ್ನು ಅವರ ಗಮನಕ್ಕೆ ತಂದು ಅದರ ಪರಿಹಾರಕ್ಕೆ ಸಲಹೆ ನೀಡುವೂದು.
೪.) ಭಾರತೀಯರನ್ನು ಬ್ರಿಟಿಷ ಸಾಮ್ರಾಜ್ಯದ ಹೆಮ್ಮೆಯ ಪೌರರನ್ನಾಗಿಸುವುದು.
೫.) ನೈತಿಕ & ಆರ್ಥಿಕ ಪ್ರಗತಿಯನ್ನು ಬ್ರಿಟಿಷ ಪೌರರಾಗಿ ಪಡೆಯುವುದು

೨. ಮಂದಗಾಮಿ ನಾಯಕರ ಬೇಡಿಕೆಗಳು

ಪ್ರಾರ್ಥನೆ, - ಅರ್ಜಿ, - ಪ್ರತಿಭಟನಾ ನೀತಿ (Pray , - Petition, - Protest Policy) ಮಂದಗಾಮಿಗಳು ತಮ್ಮ ಭೇಡಿಕೆಗಳನ್ನು ಈಡೇರಿಸಿಕೊಳ್ಳಲು ಪ್ರಾರ್ಥನೆ, ಮನವಿ, ಪ್ರತಿಭಟನೆ ಎಂಬ ನೀತಿಯನ್ನು ಅನುಸರಿಸಿದರು. ಈ ಕೆಳಗಿನ ಭೇಡಿಕೆಗಳನ್ನು ಸರಕಾರಕ್ಕೆ ಹಲವು ಬಾರಿ ಮನವಿಗಳನ್ನು ಸಲ್ಲಿಸಿದರು.

೧.) ಇಂಡಿಯಾ ಆಡಳಿತ ಮಂಡಳಿಯನ್ನು ರದ್ದುಪಡಿಸುವದು.

೨.) ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಗಳನ್ನು ಭಾರತ ಮತ್ತು ಇಂಗ್ಲೆ0ಡಿನಲ್ಲಿ ಏಕಕಾಲದಲ್ಲಿ ನಡೆಸುವದು.

೩.) ಸೈನಿಕ ವೆಚ್ಚ ಕಡಿಮೆ ಮಾಡುವದು.

೪.) ಭಾರತದಲ್ಲಿ ಔದ್ಯಮಿಕ ಮತ್ತು ತಾಂತ್ರಿಕ ಶಾಲಾ-ಕಾಲೇಜುಗಳನ್ನು ಸ್ಥಾಪಿಸುವದು. ೫.) ನ್ಯಾಯಾಂಗವನ್ನು ಕಾರ್ಯಂಗದಿ0ದ ಪ್ರತ್ಯೇಕಿಸುವದು.

೬.) ಉಪ್ಪಿನ ಮೇಲಿನ ತೆರಿಗೆಯನ್ನು ರದ್ದು ಪಡಿಸುವದು.

೭.) ವಿದೇಶಗಳಲ್ಲಿ ನೆಲಸಿರುವ ಭಾರತೀಯರ ಗೌರವ ಮತ್ತು ಹಿತರಕ್ಷಣೆ ಮಾಡುವದು. ೮.) ದೇಶಿಯ ಪತ್ರಿಕೆಗಳ ಮೇಲಿನ ನಿರ್ಬಂಧನೆಗಳನ್ನು ತಗೆದು ಹಾಕುವದು. ಇನ್ನೂ ಇತ್ಯಾದಿ

೩. ಮಂದಗಾಮಿ ನಾಯಕರ ಕಾರ್ಯ ಚಟುವಟಿಕೆಗಳು

ಮಂದಗಾಮಿಗಳು ತಮ್ಮ ಭೇಡಿಕೆಗಳನ್ನು ಈಡೇರಿಸಿಕೊಳ್ಳಲು ಭಾರತ ಮತ್ತು ಇಂಗ್ಲೆ0ಡಿನಲ್ಲಿ ಜನಾಭಿಪ್ರಾಯ ಮೂಡಿಸಲು ಕೆಳಗಿನ ಕಾರ್ಯಕ್ರಮಗಳನ್ನು ರೂಪಿಸಿದರು.

೧. ಜನ ಜಾಗೃತಿಗಾಗಿ ಭಾರತ ಮತ್ತು ಇಂಗ್ಲೆ0ಡಿನಲ್ಲಿ ಕೇಂದ್ರ ಕಛೇರಿ ಸ್ಥಾಪಿಸುವದು.

೨. ಭಾಷಣ ಮತ್ತು ಕೈಪತ್ರಗಳ ಮೂಲಕ ಭಾರತದ ಸಮಸ್ಯೆಗಳನ್ನು ಪ್ರಸಾರ ಮಾಡುವುದು

೩. ಭಾರತ & ಇಂಗ್ಲೆ0ಡಿನ ಪತ್ರಿಕೆಗಳಲ್ಲಿ ಭಾರತೀಯರ ಮೇಲಿನ ಶೋಷಣೆಯನ್ನು ಲೇಖನ ಮೂಲಕ ಪ್ರಕಟಿಸುವದು.

೪. ದಾದಾಬಾಯಿ ನವರೋಜಿಯವರು ಇಂಗ್ಲೆ0ಡಿನಲ್ಲಿ ಇಂಡಿಯಾ ಎಂಬ ಪತ್ರಿಕೆಯನ್ನು ಪ್ರಾರಂಬಿಸಿದರು.

೫. ಮ0ದಗಾಮಿ ನಾಯಕರ ಕಾರ್ಯ ಚಟುವಟಿಕೆಗಳ ಪರಿಣಾಮಗಳು

೧. ಮದ್ಯಮ ವರ್ಗದ ಭಾರತೀಯರಲ್ಲಿ ರಾಷ್ಟ್ರೀಯತೆಯನ್ನು ಜಾಗೃತ ಗೋಳಿಸಿದ್ದು

೨. ಭಾರತೀಯರಲ್ಲಿ ಪ್ರಜಾಪ್ರಭುತ್ವ ಮತ್ತು ನಾಗರೀಕ ಸ್ವಾತಂತ್ರರ್ಯದ ವಿಚಾರಗಳನ್ನು ಪ್ರಸಾರಗೋಳಿಸಿದ್ದು.

೩. ೧೮೯೨ ರಲ್ಲಿ ಇಂಡಿಯನ್ ಕೌನ್ಸಿಲ್ ಕಾಯ್ದೆಯನ್ನು ಜಾರಿಗೆ ತಂದಿದ್ದು.

೪. ತಾಂತ್ರಿಕೆ ಶಾಲೆಗಳನ್ನು ಮತ್ತು ವೈದಿಕ ಕಾಲೇಜುಗಳನ್ನು ಪ್ರಾರಂಬಿಸಿದ್ದು.

೫. ಕೇಳ ಹಂತದ ಇಲಾಖೆಗಳಲ್ಲಿ ಭಾರತೀಯರಿಗಾಗಿ ಉದ್ಯೋಗ ಸೃಷ್ಠೀಸಿದ್ದು

೬. ವಿಮರ್ಶೆ & ಉಪಸಂಹಾರ

ಮಂದಗಾಮಿಗಳ ನೀತಿಯನ್ನು ಕೆಲವರು "ರಾಜಕೀಯ ಭಿಕ್ಷಾಟನೆ" "Political Begging" ಲಾಲಾ ಲಜಪತರಾಯ " ಮಂದಗಾಮಿಗಳು ತಮ್ಮ ೨೦ ವರ್ಷಗಳ ಅವಧಿಯಲ್ಲಿ ತಾವು ಸಲ್ಲಿಸಿ ಬೇಡಿಕೆಗಳ ಈಡೇರಿಕೆಗಾಗಿ ನಡೆಸಿದ ಚಳುವಳಿಯು ವೇರ್ಥವಾಯಿತು . ರೊಟ್ಟಿಯ ಬದಲಾಗಿ ಮಂದಗಾಮಿಗಳು ಕಲ್ಲುಗಳನ್ನು ಪಡೆದರು."

ಉಪಸಂವಾರ;= ಈ ಎಲ್ಲಾ ವಿಮರ್ಶೆಗಳ ಮದ್ಯದಲ್ಲಿಯೂ ಇವರ ಸಾಧನೆ ಸಮರ್ಥನೀಯವಾಗಿದೆ. ಮದ್ಯಮ ವರ್ಗದ ಭಾರತೀಯರಲ್ಲಿ ರಾಷ್ಟ್ರೀಯತೆಯನ್ನು ಜಾಗೃತ ಗೋಳಿಸಿ ರಾಜಕೀಯ ಪ್ರಜ್ಞೆಯನ್ನು ಬೆಳಸಿ ನಾವೆಲ್ಲರೂ ಒಂದೇ ರಾಷ್ಟ್ರದ ಪ್ರಜೆಗಳು ಎಂಬ ಅರಿವನ್ನುಂಟುಮಾಡಿದರು. ಪ್ರಾರ್ಥನೆ, ಮನವಿ, ಪ್ರತಿಭಟನೆ ಮೂಲಕ ಆಂಗ್ಲ ಸರಕಾರದ ನೀತಿಯನ್ನು ಸೌಮ್ಯವಾಗಿ ಖಂಡಿಸಿ, ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಮಹತ್ವದ ಸ್ಥಾನ ಪಡೆದಿದ್ದಾರೆ